ಆಕೆ ಉದಾಸೀನಮಾಡಿದಳು. ಕೆಲವು ವದಂತಿಯನ್ನೂ ಸಹ ಹುಡುಗರ ಮಧ್ಯೆ ಹರಡುತ್ತಿದ್ದಳು. ಘೇಂಡಾಮೃಗ ಮನುಷ್ಯರನ್ನು ಹೊಡೆದು ತಿನ್ನುವ ಕ್ರೂರ ಮೃಗ; ಘೇಂಡಾಮೃಗವನ್ನು ನೋಡಿದರೆ ಕಣ್ಣುಗಳು ಕುರುಡಾಗುತ್ತವೆ ಎಂದೆಲ್ಲಾ ಅವಳು ಹೇಳುವಳು. ಒಂದು ದಿನ ನನ್ನನ್ನೂ ಸಹ ಆಕೆ ಎಚ್ಚರಿಸಲು ಹಿಂಜರಿಯಲಿಲ್ಲ. ಮಕ್ಕಳಿಂದ ಹಣ ಕೀಳುವುದಕ್ಕಾಗಿಯೇ ಅತ್ತಿಗೆ ಅದನ್ನು ತಂದಿರುವುದಾಗಿ ಹೇಳಿದ್ದನ್ನು ನಾನು ನಂಬಲು ತಯಾರಿರಲಿಲ್ಲ. ಕಾರಣ, ನಮ್ಮಿಂದ ತೆಗೆದುಕೊಳ್ಳುವ ಒಂದು ರೂಪಾಯಿಗೆ ಬದಲಾಗಿ ಅವಳು 10, 25, 50 ಪೈಸೆಗಳನ್ನು ನಮಗೆ ಕೊಡುವಳು. ಹಣ ಕೊಟ್ಟು ತಿಂಡಿ ತರಲು ಹೇಳುವುದರ ಮೂಲಕ ಒಂದು ರೂಪಾಯಿ ನಾಣ್ಯಗಳನ್ನು ಅವಳು ಶೇಕರಿಸಿದಳು. ಬಗೆ ಬಗೆಯ ತಿಂಡಿಗಳೂ ನಮಗೆ ಸಿಗುತ್ತಿತ್ತು. ಇದರಿಂದ ನನ್ನ ತಂಗಿಗೆ ಅವಳ ಮೇಲೆ ಕೋಪ ಉಕ್ಕಿಬರುತ್ತಿತ್ತು.

ಪ್ರತಿಸಲ ನಾವು ಒಂದು ರೂಪಾಯಿ ನಾಣ್ಯವನ್ನು ಕೊಡುವಾಗ ಅದನ್ನು ನೋಡುವ ಅವಕಾಶ ನಮಗೆ ದೊರಕುತ್ತಿತ್ತು. ಉಳಿದವರಿಗೆ ದೊರಕದ ಮತ್ತೊಂದು ಅವಕಾಶವೂ ನನಗೆ ದೊರಕಿತು. ಅದೆಂದರೆ ಅಲ್ಮೈರಾದ ಬೀಗದಕೈಯನ್ನು ಅವಳು ಅವಿತಿಡುವ ಜಾಗವನ್ನು ಕಂಡುಕೊಂಡದ್ದು.

ಈ ಜಗತ್ತಿನಲ್ಲಿ ನಾನು ಹೆಚ್ಚಾಗಿ ಪ್ರೀತಿಸುವ ಘೇಂಡಾಮೃಗ ಕೂಡಿಹಾಕಿರುವ ಅಲ್ಮೈರಾದ ಬೀಗದಕೈ ಈಗ ನನಗೆ ತಿಳಿದಿರುವ ಜಾಗದಲ್ಲಿ ನನಗಾಗಿ ಕಾಯುತ್ತಿದೆ. ಇಂತಹ ಅವಕಾಶವನ್ನು ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದೇ ನಾನು ಹೇಳುವೆ. ಯಾರೂ ಮನೆಯಲ್ಲಿ ಇಲ್ಲದ ಒಂದು ದಿನ ಆ ಕೆಲಸವನ್ನು ನಾನು ಮಾಡಿದೆ. ಅಲ್ಮೈರಾವನ್ನು ತೆರೆದು ವಯರ್ ಚೀಲದಲ್ಲಿ ಬಟ್ಟೆಗಳ ಕೆಳಗೆ – ಅವೆಲ್ಲಾ ಅತ್ತಿಗೆಯ ಒಳಉಡುಪುಗಳು; ಅಂದೇ ಅತ್ತಿಗೆ ಸಹ ಕಾಚ ತೊಡುತ್ತಾಳೆ ಎಂಬ ವಿಷಯ ನನಗೆ ಗೊತ್ತಾಗಿದ್ದು. ಅವಿತಿಟ್ಟಿದ್ದ ಘೇಂಡಾಮೃಗವನ್ನು ಕೈಯಲ್ಲಿ ಎತ್ತಿ ನೋಡಿದೆ. ಅದು ಭಾರವಾಗಿತ್ತು. ಅದರ ಹೊಟ್ಟೆ ಶಬ್ದದೊಂದಿಗೆ ಹೊರಳಿತು. ಇಲ್ಲಿಯವರೆಗೆ ಅದರ ಮೇಲ್ಭಾಗವನ್ನು ಮಾತ್ರವೇ ನಾನು ನೋಡಿದ್ದೆ. ಈಗ ಅದನ್ನು ತಿರುಗಿಸಿ ನೋಡಿದೆ. ಹೊಟ್ಟೆಯ ಕೆಳಗೆ ವೃತ್ತಾಕಾರದಲ್ಲಿ ತೆರೆಯುವ ಒಂದು ವ್ಯವಸ್ಥೆ ಇತ್ತು. ಅದನ್ನು ತಿರುಗಿಸಿದಾಗ ತೆರೆದು ಕೊಂಡಿತು. ಎಲ್ಲ ಇಷ್ಟು ಸುಲಭವಾಗಿ ನಡೆಯುವುದೆಂದು ನಾನು ಅಂದುಕೊಂಡಿರಲಿಲ್ಲ. ಒಳಗೆ ಒಂದು ರೂಪಾಯಿ ನಾಣ್ಯಗಳು ಮುಗುಳ್ನಗುತ್ತಿದ್ದವು. ಘೇಂಡಾಮೃಗವನ್ನು ಮತ್ತೆ ನಾನು ಅತ್ತಿಗೆಯ ಒಳಉಡುಪುಗಳಲ್ಲಿ ಅವಿತಿಟ್ಟು ಅಲ್ಮೈರಾಗೆ ಬೀಗ ಹಾಕಿದೆ. ಅಂದು

